ತಿಳಿಯದೆ ಕವಿದ ಮೌನ ಅಸಹನೀಯವಾಗುತ್ತಿದ್ದಾಗ 'ಕೈಕಾಲು ತೊಳೆದು ಕೊಳ್ರಿ, ಊಟಕ್ಕ ಬಡಸತೀನಿ' ಎಂದು ಜಾನಕಿ ಅಂದಾಗ 'ಬ್ಯಾಡ ನಾ ಊಟಾ ಮಾಡೇ ಬಂದಿನಿ' ಅಂತ ರತ್ನಾಕರ ಹೇಳಿದ್ದ. 'ಊಟಾ ಮಾಡೀನಿ ಅನ್ನೋ ಮಾತು ಮುಖ ಹೇಳ್ತದ. ಬಾಯಿ ಅಲ್ಲ, ಎಲ್ಲರಿಗೂ ಅವರ್ಧಂಗ ಸಾಧಿಸಾಂಗಿಲ್ಲಾ' ಜಾನಕಿ ತತ್‌ಕ್ಷಣ ಉತ್ತರಿಸಿದ್ದಳು. ರತ್ನಾಕರನಿಗೆ ಅನಿಸಿತು: ಇಂಥದ್ದೆಲ್ಲ ಅವನಿಗೆ ಸಾಧಿಸಿತೋ ಅಥವಾ ಅವನಿಗೆ ಸಾಧಿಸುವಂತೆ ನಾವು ಅವಕಾಶ ಕಲ್ಪಿಸಿಕೊಟ್ಟೆವೊ?

ಊಟ ಮಾಡುವಾಗ ಆ ಮಾತು ಈ ಮಾತು ಅಂತ ಮನಮೋಹನ ದೇಸಾಯಿಯ ಸಿನಿಮಾದ ಹೀರೋನಂತೆ ಕಾದರಖಾನನ ಡಾಯಲಾಗನಲ್ಲಿ ಏನೇನೋ ಬಡಬಡಿಸಿದ. ಜಾನಕಿ ನಡುನಡುವೆ ಉತ್ತರ ಕೊಡುತ್ತಿದ್ದಳು... ಕೊಡುವಂತಹ ಮಾತಿದ್ದರೆ. ಊಟವಾದ ಮೇಲೆ ರತ್ನಾಕರ 'ಇನ್ನು ಹೋಗಬೇಕು. ಹೊತ್ತಾಗ್ತದ' ಅಂದಾಗ "ಇನ್ನೊಂದು ಸ್ವಲ್ಪ, ಹೊತ್ತು ಕೂತು ಹೋಗ್ರಿ. ಹುಡುಗರು ಅಷ್ಟ್ರಾಗ ಸಾಲಿಯಿಂದ ಬರ್ತಾರ. 'ರತ್ನಾಕರ ಮಾಮಾ– ರತ್ನಾಕರ ಮಾಮಾ' ಅಂತ ಸದಾ ಅಂತಿರತೀರಿ ಯಾಕ ನಮ್ಮ ಮನೀಗೆ ಒಮ್ಮೆಯೂ ಬಂದಿಲ್ಲ ಇವ್ರು' ಅಂತ ಅಪ್ಪನನ್ನು ಕೇಳುತ್ತಿದ್ದವು" ಎಂದು ಜಾನಕಿ ಹೇಳಿದರೂ ಕೂಡ ಐದರವರೆಗೆ ಕೂಡುವುದು ಅವನಿಗೆ ಕಷ್ಟಸಾಧ್ಯ ಅನಿಸಿ 'ಮತ್ತೊಮ್ಮೆ ಬರ್ತೀನಿ' ಎಂದು ಹೊರಟವ, ಬಾಗಿಲವರೆಗೆ ಹೋಗಿ. ಒಂದು ಕ್ಷಣ ನಿಂತು. ಏನೂ ತೋಚದಂತಾಗಿ ಕೊನೆಗೆ ಒಂದು ಪಾಕೀಟು ಅವಳೆದುರಿಗೆ ಹಿಡಿದು 'ಇಟಗೊಂಡಿರಿ ಕೆಲಸಕ್ಕ ಬರ್ತಾವ' ಅಂದು, ಈ ರೀತಿ ಆದದ್ದಕ್ಕೆ ಪಾರಾದವನಂತೆ ಭಾವಿಸಿದ್ದ.

ಅವಳು ಒಂದು ಕ್ಷಣ ಏನೂ ಮಾತಾಡಲೇ ಇಲ್ಲ, ಬಹುಶಃ ವಸಂತನಂತೆ ಸಣ್ಣಗೆ ನಕ್ಕಳೇ ಎಂಬ ಪ್ರಶ್ನೆ ಅವನನ್ನು ಬಾಧಿಸಿತು.

'ಅವ್ರು ಇರೂತನಕಾ ಬೇಡ ಬೇಕಾದವರಿಗೆ ತಮ್ಮ ಕಡೆ ಇರದಿದ್ರೂ ಸಾಲಾ ಪಾಲಾ ಮಾಡಿ ತಂದು ಕೊಡತಿದ್ರು, ಯಾರನ್ನೂ ಯಾವುದಕ್ಕೂ ಎಂದೂ ಕೇಳಿಲಿಲ್ಲ. ಅವ್ರು ಹೋದ ಮ್ಯಾಲೆ ಹೀಂಗ ಅವರನ್ನ ಅಪಮಾನ ಮಾಡೋ ಹಕ್ಕು ಯಾರು ಕೊಟ್ರು ನಿಮಗ? ಮಾಫ್ ಮಾಡ್ರಿ' ಎಂದು ಜಾನಕಿ ಕೈ ಮುಗಿದಿದ್ದಳು. ರತ್ನಾಕರನಿಗೆ ಮತ್ತೆ ತನ್ನ ಬದುಕಿನ ಅರ್ಥಹೀನತೆಯ ಬಗ್ಗೆ ವಿಷಾದ ಹುಟ್ಟಿತ್ತು. ಬಸ್ಸಿನಲ್ಲಿ ಕುಳಿತಾಗ 'ಎಲ್ಲಿಗೆ?' ಎಂದು ಕಂಡಕ್ಟರ ಮೂರು ಸಲ ಕೇಳಿದರೂ ಅವನಿಗೆ ಕೇಳಿಸಿರಲೇ ಇಲ್ಲ.

ಎಷ್ಟೋ ವರ್ಷಗಳ ನಂತರ ರತ್ನಾಕರ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಸುಧೀಶನ ಮಗನ ಮುಂಜಿಗೆ ಹೋಗಿದ್ದ. ಮತ್ತೆ ಹಳೆಯ ಗೆಳೆಯರೆಲ್ಲ ಸೇರಿದ್ದರು. ಮಾತು ಅಲ್ಲಿ ಇಲ್ಲಿ ಸುತ್ತಾಡಿ ವಸಂತನ ಕಡೆಗೆ ತಿರುಗಿದಾಗ (ಇಂತಹ ಪ್ರಸಂಗದಲ್ಲೇ ಬಹುಶಃ ಕಳಕೊಂಡವರ ನೆನಪು ಬರುತ್ತದೆ) ಸುಧೀರ 'ಅಲ್ಲಪ್ಪಾ, ಆ ವಸಂತನ ಹುಡುಗ್ರು ಭಾಳ ಹುಷಾರ ಅಂತ ಕೇಳೀನಿ. ದೊಡ್ಡವನಂತೂ ಸದಾ ಓದತಿರನಂತ. ಮತ್ತ ಪ್ರತಿಯೊಂದು ಭಾಷಣ ಸ್ಪರ್ಧಾದಾಗ ಫಸ್ಟೋ ಸೆಕಂಡೋ ನಂಬರ ಅವಂದ ಅಂತ' ಎಂದು ಕೇಳಿದಾಗ ಒಮ್ಮೆಲೆ ರತ್ನಾಕರನಿಗೆ ಬೆಂಗಳೂರು–ಹರಿಹರ–ಖರ್ಡಿ ಕಣ್ಮುಂದೆ ಬಂದು ಅವನನ್ನು ಅಸ್ವಸ್ಥನನ್ನಾಗಿ ಮಾಡಿತು.

✿